Reg. No. | | | | | | | | |

**BCMKAL 153**

## ಗುಣಾಂಕ ಆಧಾರಿತ ಎರಡನೆಯ ಸೆಮಿಸ್ಟರ್ ಬಿ.ಕಾಂ. ಪದವಿ ಪರೀಕ್ಷೆ, ಮೇ/ಜೂನ್ 2016

**(ನ್ಯೂ ಸ್ಕೀಂ)**

**ಕನ್ನಡ ಭಾಷಾ ಪತ್ರಿಕೆ – II**

**(2013 – 14 ಮತ್ತು ನಂತರದವರಿಗಾಗಿ)**

ಸಮಯ : 3 ಗಂಟೆಗಳು — ಗರಿಷ್ಠ ಅಂಕಗಳು : 80

### ಭಾಗ - 1

**(ಕಾವ್ಯ)**

I. ಅ) **ಒಂದು** ಪ್ರಶ್ನೆಗೆ ವಿವರಣಾತ್ಮಕವಾಗಿ ಉತ್ತರಿಸಿರಿ. **(1×8=8)**

1) 'ನಿರ್ಗಮನ' ಕವಿತೆಯಲ್ಲಿ ಕಾಡು ಮತ್ತು ನಾಡುಗಳ ಅನುಭವಕ್ಕೆ ಮನುಷ್ಯ ಒಳಗಾದ ಬಗೆಯನ್ನು ಹೇಗೆ ಅನ್ವೇಷಿಸಲಾಗಿದೆ ? ವಿವರಿಸಿ.

2) 'ಉತ್ತರಾದೇವಿ' ಜನಪದ ಕಥನ ಗೀತೆಯಲ್ಲಿ ವ್ಯಕ್ತವಾಗಿರುವ ಹೆಣ್ಣಿನ ಸ್ಥಿತಿಯನ್ನು ವಿಮರ್ಶಿಸಿ.

ಆ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **(1×5=5)**

1) ಹರಿಹರ ಕವಿ ಮಾದರ ಚೆನ್ನಯ್ಯನ ಹಿರಿಮೆಯನ್ನು ಹೇಗೆ ಮೂಡಿಸಿದ್ದಾನೆ ? ವಿವರಿಸಿ.

2) ಸರ್ವಜ್ಞ ಕವಿ ಜನರ ರೀತಿ ನೀತಿಗಳ ಕುರಿತು ತನ್ನ ವಚನಗಳಲ್ಲಿ ಹೇಗೆ ವಿಮರ್ಶಿಸಿದ್ದಾನೆ ? ವಿವರಿಸಿ.

ಇ) **ಎರಡರ** ಬಗೆಗೆ ಟಿಪ್ಪಣಿ ಬರೆಯಿರಿ. **(2×3=6)**

1) ಕಪಿಂಜಲ

2) ಪುರಂದರ ದಾಸರು

3) ಹಂಸಲೇಖ.

II. ಅ) **ಒಂದು** ಪದ್ಯದ ಸಂದರ್ಭ ಸೂಚಿಸಿ ಭಾವವನ್ನು ವಿವರಿಸಿ. **(1×5=5)**

1) ನವ ಯೌವನದೊಳ್ ಗುಣ ದೋ
ಷ ವಿಚಾರಮನಿಂತು ಮಾಡಲೀಯದ ಭಾಷ್ಪೋ
ದ್ಭವನಿಂ ಪರವಶೆಯಾದಂ
ನವ ಕುಸುಮಾಸವದೆ ಸೊರ್ಕಿದಳಿನಿಯತೆಱದಿಂ.

P.T.O.

2) ಮೈಯನೆ ಹಿಂಡಿ ನೊಂದರು ಕಬ್ಬು
ಸಿಹಿಯ ಕೊಡುವುದು
ತೇಯುತಲಿದ್ದರು ಗಂಧದ ಪರಿಮಳ
ತುಂಬಿ ಬರುವುದು
ತಾನೇ ಉರಿದರು ದೀಪವು ಮನೆಗೆ
ಬೆಳಕ ತರುವುದು
ದೀಪ ಬೆಳಕ ತರುವುದು.

ಆ) ಎರಡು ಸಾಲುಗಳ ಸಂದರ್ಭ ಬರೆದು ಸ್ವಾರಸ್ಯ ವಿವರಿಸಿರಿ. **(2×3=6)**

1) ಅಕ್ಕ ನಾನಿಲ್ಲದ ವೇಳೆ ಬೆಕ್ಕು ಕೊಂಡು ಹೋಯಿತಯ್ಯೋ.
2) ಎನ್ನವರಂ ಲಘುವಾಗದಿರ್ಪನೊ ಅನ್ನೆಗಮೀಗಳೀಯೆಡೆಯಿನಾಂ ತೊಲಗಿರ್ಪುದು ಕಜ್ಜಂ.
3) ಶ್ವಾನ ತೆಂಗಿನಕಾಯಿ ತಾನು ಮೆಲಬಲ್ಲುದೇ ?

III. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ. **(5×1=5)**

1) ರಗಳೆ ಕಾವ್ಯ ಪ್ರಕಾರವನ್ನು ಜೀವಂತಗೊಳಿಸಿದ ಪ್ರಸಿದ್ಧ ಕವಿ ಯಾರು ?
2) 'ಅಮೇರಿಕಾದಲ್ಲಿ ಬಿಲ್ಲು ಹಬ್ಬ' ಕವನ ಸಂಕಲನದ ರಚಕರು ಯಾರು ?
3) ಮಹಾಶ್ವೇತೆಯರ ತಂದೆ ತಾಯಿಯರ ಹೆಸರುಗಳನ್ನು ತಿಳಿಸಿ.
4) 'ಶ್ವೇತ ಕೇತು' ಎಂಬ ಹೆಸರು ಯಾವ ಪಾಠದಲ್ಲಿ ಬಂದಿದೆ ?
5) ಕರ್ನಾಟಕ ಸಂಗೀತದ ಪಿತಾಮಹ ಯಾರು ?

## ಭಾಗ - 2

## (ಗದ್ಯ)

IV. ಅ) ಒಂದು ಪ್ರಶ್ನೆಗೆ ವಿವರಣಾತ್ಮಕವಾಗಿ ಉತ್ತರಿಸಿರಿ. **(1×8=8)**

1) ಭಾರತೀಯ ಕುಟುಂಬ ವ್ಯವಸ್ಥೆಯೊಳಗಿನ ಮಹಿಳೆಯ ಸ್ಥಿತಿಯ ಕುರಿತು ಡಾ.ಎನ್. ಗಾಯತ್ರಿಯವರು ವ್ಯಕ್ತಪಡಿಸಿದ ವಿಚಾರಗಳನ್ನು ವಿವರಿಸಿ.
2) 'ಮತ ನಮಗೊಂದು ದೊಡ್ಡ ಬಂಧನವಾಗಿದೆ' ಎಂಬುದಕ್ಕೆ ಕುವೆಂಪು ನೀಡಿದ ಉದಾಹರಣೆಗಳನ್ನು ವಿವರಿಸಿ.

ಆ) ಒಂದು ಪ್ರಶ್ನೆಗೆ ಪ್ರಬಂಧದ ಹಿನ್ನೆಲೆಯಲ್ಲಿ ಉತ್ತರಿಸಿರಿ. **(1×8=8)**

1) ಅಕ್ಷರ ಸಂತ ಹಾಜಬ್ಬರ ಬದುಕು ಹೇಗೆ ಮಹತ್ವಪೂರ್ಣವಾಗಿದೆ ? ವಿವರಿಸಿ.
2) ಸುದೀಪ್‌ದತ್ತ ಉದ್ಯಮ ಪತಿಯಾದ ಹಿನ್ನೆಲೆಯನ್ನು ವಿವರಿಸಿ.

V. ಒಂದು ಪ್ರಶ್ನೆಗೆ ವಿಶ್ಲೇಷಣಾತ್ಮಕ ಟಿಪ್ಪಣಿ ಬರೆಯಿರಿ. **(1×5=5)**

1) ಸರ್ವಜ್ಞನ ಮಾತುಗಳಲ್ಲಿ ಇರುವ ರಸಿಕತೆಯನ್ನು ಚೆನ್ನವೀರ ಕಣವಿಯವರು ಹೇಗೆ ತೋರಿಸಿಕೊಟ್ಟಿದ್ದಾರೆ ? ವಿವರಿಸಿ.
2) 'ಯುವಕರು ಸ್ವಾವಲಂಬಿಗಳಾಗಿ ಸಾಮಾಜಿಕ ಕಾರ್ಯಗಳಲ್ಲಿ ತೊಡಗಬೇಕು' ಎಂಬ ಕುವೆಂಪು ಅವರ ಚಿಂತನೆಯನ್ನು ವಿಮರ್ಶಿಸಿ.

VI. ಒಂದು ವಾಕ್ಯದಲ್ಲಿ ಉತ್ತರಿಸಿ. (1×4=4)

1) 'ಕಿತ್ತಳೆ ಬುಟ್ಟಿಯಲ್ಲಿ ಅರಳಿದ ಅಕ್ಷರಗಳು' ಎಂಬ ಲೇಖನವನ್ನು ಬರೆದವರು ಯಾರು ?

2) ಬೇಂದ್ರೆಯವರ ಕಾವ್ಯನಾಮ ಯಾವುದು ?

3) 'ಮಹಿಳೆ: ಸಂಕೋಲೆಯ ಹಿಡಿತದಲ್ಲಿ' ಇದು ಯಾರು ಬರೆದ ಲೇಖನ ?

4) ಸುದೀಪ್ ದತ್ತ ಅವರು ಮುಂಬೈಯಲ್ಲಿ ಪ್ರಾರಂಭಿಸಿದ ಕೆಲಸಕ್ಕೆ ಸಿಗುತ್ತಿದ್ದ ಸಂಬಳವನ್ನು ತಿಳಿಸಿ.

## ಭಾಗ – 3

## (ನಾಟಕ)

VII. ಅ) ಒಂದು ಪ್ರಶ್ನೆಗೆ ವಿವರಣಾತ್ಮಕವಾಗಿ ಉತ್ತರಿಸಿರಿ. (1×8=8)

1) ಭರತ ಮತ್ತು ಬಾಹುಬಲಿಯರ ಮಂತ್ರಿಗಳು ಹಾಗೂ ಸೈನಿಕರು ಯುದ್ಧ ಬೇಡ ಎಂಬ ಬಗೆಗೆ ನಡೆಸಿದ ಮಾತುಗಳನ್ನು ಸಂಗ್ರಹಿಸಿ ವಿವರಿಸಿ.

2) ನಾಟಕದಲ್ಲಿ ಉತ್ಸವದ ಸಿದ್ಧತೆಗಳ ನೋಟವನ್ನು ಗೋಚರ ಮತ್ತು ಅಗೋಚರರ ಮೂಲಕ ಹೇಗೆ ಕಾಣಿಸಲಾಗಿದೆ ? ವಿವರಿಸಿ.

ಆ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. (1×6=6)

1) ನೀಲಾಂಜನೆ ನೃತ್ಯದ ಸನ್ನಿವೇಶ ಮತ್ತು ಪರಿಣಾಮವನ್ನು ನಾಟಕದಲ್ಲಿ ಹೇಗೆ ತೋರಿಸಲಾಗಿದೆ ? ವಿವರಿಸಿ.

2) ಭರತನೊಡನೆ ನಡೆಸಬೇಕಾದ ಯುದ್ಧದ ಕುರಿತಾಗಿ ಬಾಹುಬಲಿಯ ಮಾತುಗಳನ್ನು ವಿಮರ್ಶಿಸಿ.

VIII. ಎರಡು ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. (2×2=4)

1) ಅಹಿಂಸೆಯನ್ನು ಆಚರಿಸಿ ಧರ್ಮ ನಿರತನಾದರೆ ದೊರೆಯುವ ಫಲಗಳಿಗೆ ಪಾರವುಂಟೆ ?

2) ಭೂಮಿಗಾಗಿ ಮೊಟ್ಟ ಮೊದಲು ಯುದ್ಧ ಸಾರಿದ ಮೂರ್ಖರನ್ನು ಸಾವಿರ ಸಲವಾದರೂ ಹಿಡಿದು ಬಡಿಯಬೇಕೆನಿಸುತ್ತದೆ.

3) ಹುಟ್ಟುತ್ತಾ ಅಣ್ಣ ತಮ್ಮಂದಿರು ಬೆಳೆಯುತ್ತಾ ದಾಯಾದಿಗಳು ಅನ್ನಿಸಿಕೊಳ್ಳಬೇಡಿ.

IX. ಒಂದು ವಾಕ್ಯದಲ್ಲಿ ಉತ್ತರಿಸಿರಿ. (2×1=2)

1) 'ಖಂಜೀರ' ಎಂದರೇನು ?

2) ಬಾಹುಬಲಿ ಆಳುತ್ತಿದ್ದ ಪಟ್ಟಣದ ಹೆಸರೇನು ?